(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No. (B) 4776
ದಿನಾಂಕ Date.....

MYSORE LEGISLATIVE ASSEMBLY

FORTY-SEVENTH DAY

Monday, 28th April 1958.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI S. R. KANTHI, B.A., LL.B.) in the Chair.

QUESTIONS AND ANSWERS.

Harijans converted to Christianity and Buddhism in the State.

Q.—1795. Sri J. L. KABADI (Indi).—

Will the Government be pleased to state :—

(*a*) the number of Harijans who have embraced Christianity and Buddhism in the new Mysore State;

(*b*) whether any aid which was given to them before conversion has now been discontinued due to their conversion;

(*c*) if so, since when such aid has been stopped;

(*d*) whether such converts have made a representation requesting to continue that aid ?

A.—Sri R. CHENNIGARAMAIAH (Minister for Local Self-Government).—

(*a*) Districtwise information is furnished :—

		Christianity	*Buddhism.*
1	Bangalore	...	...
2	Mysore	900	...
3	Chickmagalore	Not available	
4	Chitaldrug	128	...
5	Hassan	Not available	
6	Shimoga	Do	
7	Kolar	230	...
8	Tumkur	Not available	
9	Bellary	223	...
10	Mandya	406	...
11	South Kanara	2,713	...
12	North Kanara	23,234 (based on 1951 census)	....
13	Dharwar	372	31
14	Bijapur	28	....
15	Gulbarga	Not available	
16	Raichur	3,456	....
17	Bidar	15,000	...
18	Belgaum	7,126	1
19	Coorg	Not available	

(*b*) All privileges guaranteed by the Constitution to Scheduled Castes are not extended to the converts. But educational and other concessions shown to other Backward Classes are extended to converts.

(*c*) Does not arise in view of the reply to (*b*) above.

(*d*) No.

ಶ್ರೀ ಜೆ. ಎಲ್. ಕಬಾಡಿ.—ಈ ಮಾಹಿತಿಯನ್ನು ಸರ್ಕಾರ ಯಾರಿಂದ ತರಿಸಿದ್ದು ?

*ಶ್ರೀ ಆರ್. ಚೆನ್ನಿಗರಾಮಯ್ಯ.—ಸಂಬಂಧಪಟ್ಟ ಇಲಾಖೆಯಿಂದ.

ಶ್ರೀ ಜೆ. ಎಲ್. ಕಬಾಡಿ.—ಯಾವ ಇಲಾಖೆಯಿಂದ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸೋಷಿಯಲ್ ವೆಲ್‌ಫೇರ್ ಡೈರೆಕ್ಟರು ಕಳುಹಿಸಿದ್ದಾರೆ.

ಶ್ರೀ ಜೆ. ಎಲ್. ಕಬಾಡಿ.—ಶೈಕ್ಷಣಿಕ ಮತ್ತು ಇತರ ಸೌಲಭ್ಯಗಳನ್ನು ಇತರ ಹಿಂದುಳಿದವರಿಗೆ ಕೊಡುವಂತೆ ಇವರಿಗೂ ಕೊಡಲಾಗಿದೆ ಎಂದು ತಿಳಿಸಿದೆ; ಕ್ರಿಶ್ಚಿಯನ್ನರಿಗೂ ಮತ್ತು ಬೌದ್ಧರಿಗೂ ಇವನ್ನು ಕೊಡುತ್ತೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಪೆಡ್ಯೂಲ್ಡ್ ಕ್ಯಾಸ್ಟ್‌ನವರು ಕ್ರಿಶ್ಚಿಯನ್ನರಾಗಿದ್ದರೆ ಕೊಡಬಹುದು.

ಶ್ರೀ ಜೆ. ಎಲ್. ಕಬಾಡಿ.—ಇದನ್ನು ಹೇಗೆ ಕಂಡು ಹಿಡಿಯುವುದು ? ಇದಕ್ಕೆ ರಿಜಿಸ್ಟರ್ ಇದೆಯೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಹೌದು, ರುಜುವಾತಾದರೆ ಅಂಥವರಿಗೆ ಕೊಡುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—ಆ ರಿಜಿಸ್ಟರು ಯಾರಲ್ಲಿರುತ್ತದೆ ?

* Asterisk indicates that the remarks or speeches have not been revised by the member concerned.

ಶ್ರೀ ಆರ್. ಚೆನ್ನಿಗರಾಮಯ್ಯ.—ಮಿಷನರಿಗಳ ಹತ್ತಿರ ಇರುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ಅವರು ಸರಿಯಾದ ಸಮಾಚಾರ ಕೊಟ್ಟಿಲ್ಲವೆಂಬುದು ಗೊತ್ತಿದೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಯಾವುಧಾದರೂ ಹಾಗೆಂದು ಗೊತ್ತಾದರೆ verify ಮಾಡಿ ಸರಿಮಾಡುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—ಜನಸಂಖ್ಯೆಯ ಅಂಕಿ ಅಂಶಗಳನ್ನು ಕೊಟ್ಟಿರುವುದು ಬೊಂಬಾಯಿ, ಹೈದರಾಬಾದು ಮತ್ತು ಕೊಡಗು ಕರ್ನಾಟಕದಲ್ಲಿ 1951ನೆಯ ಇಸವಿ ಸೆನ್ಸಸ್ ಪ್ರಕಾರ, ಹಳೆಯ ಮೈಸೂರಿನ ಅಂಕಿಅಂಶಗಳನ್ನು ಕೊಟ್ಟಿರುವುದು ಯಾವ ಆಧಾರದಮೇಲೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸ್ಥಳೀಯ ಅಧಿಕಾರಿಗಳು ವಿಚಾರಮಾಡಿದ್ದಾರೆ; ಬಹುಶಃ ಅಲ್ಲಲ್ಲಿನ ಮಿಷನರಿಗಳನ್ನು ಕೇಳಿ ತಿಳಿದುಕೊಂಡು ಕೊಟ್ಟಿದ್ದಾರೆ.

ಶ್ರೀ ಜೆ. ಎಲ್. ಕಬಾಡಿ.—1951ನೆಯ ಇಸವಿ ಸೆನ್ಸಸ್ ಪ್ರಕಾರ ಬೊಂಬಾಯಿ, ಹೈದರಾಬಾದು ಕೊಡಗು ಪ್ರದೇಶದ ಅಂಕಿಅಂಶಗಳನ್ನು ಕೊಟ್ಟಿದ್ದಾರೆ; ಹಳೆಯ ಮೈಸೂರಿನ ಅಂಕಿಅಂಶಗಳನ್ನು ಯಾವ ಸೆನ್ಸಸ್ ಪ್ರಕಾರ ಕೊಟ್ಟಿದೆ?

ಶ್ರೀ ಆರ್. ಚೆನ್ನಿಗರಾಮಯ್ಯ.—1951ನೆಯ ಇಸವಿ ಸೆನ್ಸಸ್ ಪ್ರಕಾರ.

National Highways in the State.

Q.—2127. **Sri G. SIVAPPA** (Chitradurga)—[(On behalf of SRI G. ANNA RAO (Afzalpur)].—

Will the Government be pleased to state:—

(*a*) the number of National High Ways in the State;

(*b*) the number of original works undertaken and the amount spent on their repairs and maintenance during 1956-57;

(*c*) the number of original works approved by the Central Government during the Second Plan period?

A.—**Sri H. K. VEERANNA GOWDH** (Minister for Public Works).—

(*a*) Three.

(*b*) 33 works—Rs. 15,21,073.

(*c*) 62 works, of which thirty are carried over from the First Five-Year Plan.

Sri G. SIVAPPA.—May I know the number and which are the National Highways in the Road?

***Sri H. K. VEERANNA GOWDH.**—The National Highways are No. 4, No. 7 and No. 9.

Sri G. SIVAPPA.—Which are these Highways, Sir?

Sri H. K. VEERANNA GOWDH.—Highway No. 4—ಬೊಂಬಾಯಿ-ಪೂನ-ಬೆಂಗಳೂರು-ಮದರಾಸು-ಬೆಳಗಾಂ, ಧಾರವಾಡ ರಸ್ತೆ; ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಹೆಚ್ಚು ಭಾಗ ಹೋಗುವ ಮದರಾಸು ರಸ್ತೆ ಸೇರಿದೆ. National Highway No. 7-ಇದು ಬೆನಾರೆಸ್‌ನಿಂದ ಕನ್ಯಾಕುಮಾರಿಯವರೆಗಿದೆ. ಬೆಂಗಳೂರಿನಿಂದ ದೇವನಹಳ್ಳಿ ಬಾಗೇಪಲ್ಲಿವರೆಗೆ ಹೋಗುವುದು ನಮ್ಮ ರಾಜ್ಯಕ್ಕೆ ಸೇರಿದೆ. 9ನೆಯದು ಬೆಜವಾಡ-ಹೈದರಾಬಾದು ರಸ್ತೆ. ಸ್ವಲ್ಪ ಭಾಗ ಬದರೆಗೆ ಹೋಗುತ್ತದೆ. ಇದು ಆಂಧ್ರ ಪ್ರದೇಶಕ್ಕೆ ಸಂಬಂಧ ಕಲ್ಪಿಸುತ್ತದೆ.

ಶ್ರೀ ಜಿ. ಶಿವಪ್ಪ.—ಇದನ್ನು ಜಾಸ್ತಿಮಾಡುತ್ತಾರೆಯೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾವು ಬರೆಯಬಹುದು. ಮದರಾಸು-ಕನ್ಯಾನೂರು ರಸ್ತೆಯನ್ನು ನ್ಯಾಷನಲ್ ಹೈವೇಆಗಿ ಸೇರಿಸಬೇಕೆಂದು ಬರೆಯಬಹುದು, ಆದರೆ ಅವರು ಒಪ್ಪಿಕೊಳ್ಳಬೇಕು.

Sri G. SIVAPPA.—May I know the grant given by the Central Government and our State Government for these National Highways? What is the maintenance grant per mile?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದರ ಸಂಬಂಧವಾಗಿ ಒಂದು ಕಾನೂನುಮಾಡಿದ್ದಾರೆ; ಅದರ ಪ್ರಕಾರ ಈ ರಸ್ತೆಗಳು ಅವರಿಗೆ ಸೇರಿದುವು, ಅವರ ಆಸ್ತಿ. The entire responsibility of financing as well as repairing is that of the Government of India.

Sri G. SIVAPPA.—Who are the supervisors?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾವು ಅವರ ಏಜೆಂಟುಗಳಾಗಿ ಕೆಲಸಮಾಡುತ್ತೇವೆ.

Sri G. SIVAPPA.—We are the supervisors above you, Sir?

ಶ್ರೀ ಎಚ್. ಕೆ. ವೀರಣ್ಣಗೌಡ.—ಸೂಪರ್‌ವೈಸರ್ಸ್ ಎಂದೇನೂ ಇಲ್ಲ. ಸೂಪರಿಂಟೆಂಡಿಂಗ್ ಇಂಜಿನಿಯರ ಗ್ರೇಡಿನ ಒಬ್ಬರು ಅಧಿಕಾರಿ ಇದ್ದಾರೆ. Southern zoneಗೆಲ್ಲ ಅವರು ಅಧಿಕಾರಿ; ಅವರು ಸೂಪರ್‌ವೈಸ್ ಮಾಡುವುದಿಲ್ಲ 'ಲೈಸ್ಸಾ' ಆಗಿ ಕೆಲಸಮಾಡುತ್ತಾರೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಬೆಂಗಳೂರು ಹೊನ್ನಾವರ ರಸ್ತೆಕೂಡ ನ್ಯಾಷನಲ್ ಹೈವೇ ಆಗುವುದು ಸೂಕ್ತವಲ್ಲವೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಅಭಿಪ್ರಾಯ; ಸೂಕ್ತವಲ್ಲವೆಂದು ಹೇಳುವುದಿಲ್ಲ. ಬದರೆ-ಕರ್ನೂಲು ಮಾರ್ಗವಾಗಿ ಬೆಜವಾಡದಿಂದ ಬರುವ ರಸ್ತೆಕೂಡ ನ್ಯಾಷನಲ್ ಹೈವೇ ಆಗುವುದು ಸೂಕ್ತ; ಆದರೆ ಅವರು ಒಪ್ಪಬೇಕು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ನ್ಯಾಷನಲ್ ಹೈವೇಸ್‌ನಲ್ಲಿ ನಮ್ಮ ರಾಜ್ಯದಲ್ಲಿರುವುದಕ್ಕಿಂತ ಬೇರೆ ಕಡೆ ಇರುವುದು ಉತ್ತಮವಾಗಿಲ್ಲವೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾನು ಬೇರೆ ಕಡೆ ನೋಡಿಲ್ಲ; ಅದು ಉತ್ತಮ ಎಂಬುದನ್ನು ಹೇಗೆ ಒಪ್ಪುವುದಕ್ಕಾಗುತ್ತದೆ?

ಶ್ರೀ ಎಸ್. ಸುಬ್ಬಯ್ಯನಾಯಕ್.—ನ್ಯಾಷನಲ್ ಹೈವೇ ಮಂಗಳೂರು-ಕಾರವಾರಕ್ಕೆ ಹಾದುಹೋಗುವುದಿಲ್ಲವೆ?